

# ಸಂದೇಶ ಸಾರಿದ ಸಂದೇಶ

■ ಲಲಿತಾ ಕೆ. ಹೊಸಪ್ಯಾಟಿ

ಕಲೆ: ಸಂತೋಷ್ ಸಸಿಹಿತ್ಲು

ಹೆಸರು ಸಂದೇಶ. 8ನೇ ತರಗತಿ ಬಾಲಕ. ಸರಕಾರಿ ಪ್ರೌಢ ಶಾಲೆ ಹಿಮವಾಡಗಿಯಲ್ಲಿ ಓದುತ್ತಿದ್ದ. ಜಾಣ ವಿದ್ಯಾರ್ಥಿ. ನಿಯಮಿತದ ಹಾಜರಾತಿ ಶಾಲೆಗೆ ತಡವಾಗಿ ಬಂದವನಲ್ಲ. ಓದು ಬರಹ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಎಲ್ಲದರಲ್ಲೂ ಮುಂದು. ಶಾಲೆ ಊರು ಬಿಟ್ಟು ದೂರದಲ್ಲಿತ್ತು. ಶಾಲೆಯಲ್ಲಿ ಉಚಿತ ಸೈಕಲ್ ಕೊಟ್ಟಿದ್ದರು. ಆ ಸೈಕಲ್ ಎಂದರೆ ಅವನಿಗೆ ಬಲು ಪ್ರೀತಿ.

ಅಪ್ಪನಿಂದ 100 ರೂ ಪಡೆದು ಬಣ್ಣದ ರಿಬ್ಬನ್. ಮುತ್ತಿನ ಮಣಿ, ಬಣ್ಣದ ಕಾಗದ, ಮೇರಾ ಭಾರತ್ ಮಹಾನ್ ಸ್ಟಿಕರ್ ತಂದು ಆ ಸೈಕಲಿಗೆ ಅಂಟಿಸಿದ್ದ. ಅಪ್ಪ ಒಮ್ಮೊಮ್ಮೆ ಮಗಾ ಇವತ್ತು ನಿನ್ನ ಸೈಕಲ್ ಕೊಡು ಹೊಲಕ್ಕೆ ಹೋಗಿ ಬರುವೆ ಎಂದರೆ, ಬೇಡಾ ಅಪ್ಪಾ ನೀನು ಸೈಕಲ್ ಕೆಡಿಸಿದರೆ ಕಷ್ಟ. ಟೀಚರ್ ಬೈಯುತಾರೆ. ನಾನೇ ಬಿಟ್ಟು ಬರುವೆ ಎಂದು ಅಪ್ಪನನ್ನು ಸೈಕಲ್ ಹಿಂದೆ ಕೂಡಿಸಿಕೊಂಡು ಹೊರಟೇ ಬಿಡುತ್ತಿದ್ದ. ಹ್ಯಾಂಡಲ್‌ಗೆ ನೀರಿನ ಬಾಟಲಿ, ಬುತ್ತಿಯ ಗಂಟು, ಟವೆಲ್ ಎಲ್ಲ ತುಂಬಿದ ಚೀಲ ಇಳಿಬಿಟ್ಟು ಪೆಡಲ್ ತುಳಿಯುತ್ತಾ ಹೋಗುವುದೆಂದರೆ ಬಲು ಖುಷಿ. 70 ಕೆ.ಜಿ. ತೂಕದ ಅಪ್ಪ, ಪಾವು ಕೆ.ಜಿ. ಹೂವು ಕೂತಂತೆ ಅನಿಸುತ್ತಿತ್ತು. ಮನೆಯಲ್ಲಿಯೂ ಅಮ್ಮ ಸಾವಿತ್ರಿಗೆ ಮನೆ ಕೆಲಸದಲ್ಲಿ ನೆರವಾಗಿ, ಸಮವಸ್ತ್ರ ತೊಟ್ಟು ಶಾಲೆಗೆ ಹೋಗುತ್ತಿದ್ದ.

ಅಲ್ಲಿಯೂ ಪ್ರಾರ್ಥನೆಗೆ ಡ್ರಮ್ ಸೆಟ್ ಜೋಡಿಸುವುದು, ನಾಡಗೀತೆ ಹೇಳಲು ಮೈಕ್ ತಂದಿಡುವುದು. ಶಿಕ್ಷಕರಿಗೆ ಜಮಖಾನೆ ಹಾಸುವುದು ಮಾಡುತ್ತಿದ್ದ. ಹಾಲು ಕುಡಿಯಲು ಬರುವ ಮಕ್ಕಳಿಗೂ ಸಾಲಲ್ಲಿ ನಿಲ್ಲಿಸಿ ಅವರು ಕುಡಿದ ಲೋಟಗಳನ್ನು ಒಂದು ಕಡೆ ಇರಿಸಿ, ತಾನೂ ಹಾಲು ಕುಡಿದು ಕ್ಲಾಸ್ ರೂಮಿಗೆ ಹೋಗುತ್ತಿದ್ದ. ಎಲ್ಲ ವಿಷಯಗಳನ್ನು ಏಕಾಗ್ರತೆಯಲ್ಲಿ ಕೇಳಿ ತಿಳಿದುಕೊಳ್ಳುತ್ತಿದ್ದ.

ಆ ದಿನ ಶಾಲೆಯಲ್ಲಿ ಪರೀಕ್ಷೆ ಇತ್ತು. ಸಮಯ ಮೀರಿದರೂ ಸಂದೇಶ ಬಂದಿರಲಿಲ್ಲ. ತಡ ಮಾಡಿ ಬಂದರೆ ಹೇಗಪ್ಪ. ಮತ್ತೆ ಎಚ್.ಎಂ. ಅನುಮತಿ ತೆಗೆದುಕೊಳ್ಳಬೇಕು, ಎಂದು ಅವರ ವರ್ಗದ ಟೀಚರ್ ಪ್ರತಿಮಾ ಅತ್ತ ಇತ್ತ ಓಡಾಡುತ್ತಾ ಸಂದೇಶ ಬರುವ ಹಾದಿಯನ್ನೇ ಕಾಯುತ್ತಿದ್ದರು. ದಿನವೂ ಮನೆಯ ಮುಂದೆ ಪ್ರತಿಮಾ ಟೀಚರ್ ಮಾತಾಡಿಸುತ್ತಿದ್ದ. ಟೀಚರ್ ಇನ್ನೂ ಶಾಲೆಗೆ ಹೋಗಿಲ್ಲ ಎಂಬುದರ ಖಾತ್ರಿಗೆ. ಮುಂಚಿತವಾಗಿ ಶಾಲೆ ತಲುಪಬೇಕೆಂದು ಸೈಕಲ್ ಓಡಿಸಿಕೊಂಡು ಹೋಗುತ್ತಿದ್ದ. ಅದನ್ನು ನೋಡುತ್ತಿದ್ದ ಟೀಚರ್‌ಗೆ ಸಂದೇಶನ ಮೇಲೆ ಮಮತೆ ಉಕ್ಕಿಬರುತ್ತಿತ್ತು.

ಸಂದೇಶ ಸೈಕಲ್ ಮೇಲೆ ಅವರಪ್ಪನ ಬಿಟ್ಟುಬರಲು ಹೊಲಕ್ಕೆ ಹೋಗಿದ್ದಾನೆ, ಅದಕ್ಕೆ ತಡವಾಗಿದೆ ಎಂದು ಕೋಪದಲ್ಲಿದ್ದರು. ಅಪ್ಪರಲ್ಲಿಯೇ ಸೈಕಲ್ ಅಂಗಳದಲ್ಲಿ ನಿಲ್ಲಿಸಿ